ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2014-15ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2505-60-101-0-06-059 ರಲ್ಲಿ ಲಭ್ಯವಿರುವ ರೂ.100.00 ಅನುದಾನದಲ್ಲಿ ರೂ.50.00 ಲಕ್ಷಗಳನ್ನು ಮಹಾತ್ಮಗಾಂಧಿ ಪ್ರಾಂತೀಯ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಲೆಕ್ಕ ಶೀರ್ಷಿಕೆ: 2501-04-105-0-02-059 ಗೆ ಪುನರ್ವಿನಿಯೋಗ ಮೂಲಕ ವೆಚ್ಚ ಭರಿಸಲು ಮಂಜೂರಾತಿ ಕುರಿತು.

ಉಲ್ಲೇಖ: ಕಾರ್ಯನಿರ್ವಾಹಕ ನಿರ್ದೇಶಕರು, ಮಹಾತ್ಮ ಗಾಂಧಿ ಪ್ರಾಂತೀಯ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು ರವರ ಪತ್ರ ಸಂಖ್ಯೆ: ಎಂಜಿಐ/ಬಜೆಟ್/105/2014-15/1394 ದಿನಾಂಕ 03.03.2015

ಪ್ರಸ್ತಾವನೆ :

ಉಲ್ಲೇಖದ ಪತ್ರದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಮಹಾತ್ಮ ಗಾಂಧಿ ಪ್ರಾಂತೀಯ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು ರವರು ಲೆಕ್ಕ ಶೀರ್ಷಿಕೆ 2501-04-105-0-02-059 ರಡಿ 2014-15ನೇ ಸಾಲಿಗೆ ಅಧಿಕಾರಿಗಳ ವಸತಿ ಗೃಹ, ಕೌಶಲ್ಯ ಅಭಿವೃದ್ಧಿ ಮತ್ತು ಹಾಸ್ಟೆಲ್ ಮೇಲ್ಛಾವಣಿಗಳ ಕಾಮಗಾರಿಗಳಿಗೆ ಹೆಚ್ಚಿನ ಅನುದಾನವನ್ನು ನೀಡಲು ಕೋರಿರುತ್ತಾರೆ. ಪ್ರಯುಕ್ತ ಈ ಆದೇಶ.

## ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ/222/ಎ.ಎಫ್.ಎನ್./2015 ದಿನಾಂಕ 10.03.2015

ಪ್ರಸ್ತಾವನೆಯಲ್ಲಿ ವಿವರಿಸಲಾದಂತೆ, 2014-15ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2505-60-101-0-06-059 ರಲ್ಲಿ ನಿಗದಿಪಡಿಸಿದ ಆಯವ್ಯಯದಲ್ಲಿ ಲಭ್ಯವಿರುವ ರೂ.100.00 ಲಕ್ಷಗಳ ಅನುದಾನದಿಂದ **ರೂ.50.00 ಲಕ್ಷಗಳನ್ನು (ರೂ. ಐವತ್ತು ಲಕ್ಷಗಳು ಮಾತ್ರ)** ಲೆಕ್ಕ ಶೀರ್ಷಿಕೆ 2501-04-105-0-02-059 ಗೆ ಮಹಾತ್ಮಗಾಂಧಿ ಪ್ರಾಂತೀಯ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಗೆ ಅನುಬಂಧದಲ್ಲಿರುವಂತೆ ಪುನರ್‌ವಿನಿಯೋಗಕ್ಕೆ ಮಂಜೂರಾತಿ ನೀಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : FD/11/TFP/2007, dated 27.11.2007ರಲ್ಲಿ ಪುನರ್‌ವಿನಿಯೋಗ ಮಾಡಿಕೊಳ್ಳಲು ಸರ್ಕಾರದ ಕಾರ್ಯದರ್ಶಿ/ಆಡಳಿತ ಇಲಾಖೆ ಮುಖ್ಯಸ್ಥರಿಗೆ ಪ್ರತ್ಯಾಯೋಜಿಸಿದ ಅಧಿಕಾರದ ಅನ್ವಯ ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಟಿ.ಎಂ. ವಿಜಯಭಾಸ್ಕರ್)
ಅಪರ ಮುಖ್ಯಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಇವರಿಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಸರ್ಕಾರದ ಕಾರ್ಯದರ್ಶಿರವರ (ಪಂ.ರಾ) ಯವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, 2ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು
5. ಕಾರ್ಯನಿರ್ವಾಹಕ ನಿರ್ದೇಶಕರು, ಮಹಾತ್ಮ ಗಾಂಧಿ ಪ್ರಾಂತೀಯ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ, ಬೆಂಗಳೂರು
6. ಉಪ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಸೆಕೆಂಡ್ ಫ್ಲೋರ್, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
7. ರಕ್ಷ ಕಡತಕ್ಕೆ / ಹೆಚ್ಚುವರಿ ಪ್ರತಿಗಳು.